ಕಥೆ

# ಮುಂಗಾರು




**ಬಂಗಾಳಿ ಮೂಲ: ಬರ್ಹಾನುದ್ದೀನ್ ಜಹಾಂಗೀರ್**
**ಕನ್ನಡಕ್ಕೆ: ಯೋಗೀಂದ್ರ ಮರವಂತೆ**

ಕಲೆ: ಸಂತೋಷ್ ಸಸಿಹಿತ್ಲು

ಸಂಜೆ ಏಳಕ್ಕೆ ಮಳೆ ಬರುವುದು ಶುರು ಆಯಿತು. ಮಳೆಯ ಜೊತೆಗಿನ ಗಾಳಿ ಹೆಚ್ಚಾಗಿ ಮುಂಗಾರನ್ನೂ ಹೊತ್ತು ತರುವಂತಹದ್ದು. ಶೌಕತ್ ಇನ್ನೂ ತನ್ನ ಕೋಣೆಯ ಹಾಸಿಗೆಯಲ್ಲಿದ್ದ. ಕಿಟಕಿಯಿಂದ ಮಳೆ ಒಳಗೂ ಬರುತ್ತಿತ್ತು, ಹನಿಗಳು ಮುಚ್ಚಿದ ಕಣ್ಣ ರೆಪ್ಪೆಯ ಮೇಲೆ ಬಿದ್ದವು. ಮತ್ತೊಮ್ಮೆ ಅವನ ನೆಚ್ಚಿನ ಕನಸನ್ನು ಸವಿಯುತ್ತಿದ್ದ.

ಪುರುಷರು ಕನಸನ್ನು ಸಾಕುತ್ತಾರೆ ಆದರೆ ಸಾಕಾರ ಆಗುವುದಿಲ್ಲ. ಶೌಕತ್ ನಿರುದ್ಯೋಗಿಯಾಗಿ ಒಂದು ವರ್ಷ ಆಯಿತು, ಈಗೊಂದು ಉದ್ಯೋಗದ ಸಾಧ್ಯತೆ ಇತ್ತು. ಸಂದರ್ಶನ ಮುಗಿದಿತ್ತು, ಫಲಿತಾಂಶಕ್ಕಾಗಿ ಕಾಯುತ್ತಿದ್ದ. ತನ್ನ ಕಗ್ಗತ್ತಲ ಘಳಿಗೆಯಲ್ಲೂ ಪರಿಸ್ಥಿತಿ ಹೀಗಾಗುತ್ತದೆ ಎಂದು ಶೌಕತ್ ಅಂದುಕೊಂಡಿರಲಿಲ್ಲ. ವಿಶ್ವವಿದ್ಯಾಲಯದಿಂದ ಪದವಿ ಪಡೆದಾಗ ಸಾಧಾರಣ ನೌಕರಿ ದೊರಕಿ ತಿಂಗಳಿಗೊಂದು ಐದುನೂರು ರೂಪಾಯಿ ಸಂಬಳ ಸಿಗಬಹುದು ಎಂದುಕೊಂಡಿದ್ದ. ಪ್ರಶಾಂತ ಬೀದಿಯಲ್ಲೊಂದು ಮನೆ, ಹಾಲಿನಲ್ಲಿ ಪಿಯಾನೋ, ಎದುರು ಕುಳಿತು ನುಡಿಸುವ ತನ್ನ ಕೈಗಳು. ಅವನು ಬಯಸಿದ ಭವಿಷ್ಯದ ಶಾಂತಿ ಮೌನಗಳು ಸಮಯದ ದೂಳಿನಿಂದ ಮುಸುಕಿ ಹೋಗಿದ್ದವು. ಅವನೊಳಗೆ ಕೊರೆಯುತ್ತಿದ್ದ ಪ್ರಶ್ನೆ ಉದ್ಯೋಗವನ್ನು ನೀಡುವ ಶಕ್ತಿ ಇಲ್ಲದ ಸರಕಾರವಾದರೂ ಏಕೆ ಅಧಿಕಾರದಲ್ಲಿರಬೇಕು?

ಭೂಮಿಯ ಅತಿಯಾದ ಒತ್ತಡ ಕರಗಿದ ಲಾವಾವನ್ನು ಗಟ್ಟಿ ಶಿಲೆಯಾಗಿಸಿದಂತೆ, ಬಹುಸಮಯದ ಹತಾಶೆಯ ಉರಿಯುತ್ತಿರುವ ಆತಂಕ ಮಡುಗಟ್ಟಿ ಹೋಗಿತ್ತು. ಏನೇ ಇದ್ದರೂ ಒಂದು ವರ್ಷ ಉದ್ಯೋಗ ಇಲ್ಲದೆ ವೃದ್ಧ ತಂದೆಯ ಮೇಲೆ ಹಿಡಿ ಅಕ್ಕಿಗೂ ಅವಲಂಬಿತನಾದವನಿಗೆ ಅಂತಹ ಹಗಲುಗನಸುಗಳು ಬೀಳಬಾರದು. ಬರೇ ಉಸಿರಾಡಿಕೊಂಡಿರುವುದಕ್ಕಾದರೆ ಅಂತಹ ಕನಸುಗಳಷ್ಟೇ ಸಾಕು. ಆದರೆ ತನ್ನ ಉಳಿವು ಬಾಕಿ ಸಾಮಾನ್ಯ ಮಂದಿಯಂತಷ್ಟೆಯೇ? ಶೌಕತ್ ಯೋಚಿಸಿದ.

ತಾನು ಸಲಹಿದ ಕನಸುಗಳು ನಿಷ್ಪ್ರಯೋಜಕ ಎಂದು ಗೊತ್ತಾದಾಗ ಜೀವನದ ಕ್ರೂರ ಸತ್ಯಗಳನ್ನು ಅರಗಿಸಿಕೊಳ್ಳುವುದು ಸುಲಭವಾಗಲಿಲ್ಲ. ಇತರರು ಅವನನ್ನು ಯಾವುದಕ್ಕೂ ಆಗದವ ಎಂದು ತಿಳಿಯುವ ಸಾಧ್ಯತೆಯೇ ಹೆಚ್ಚು. ತನ್ನದು ಎನ್ನುವ ಗುರುತೇ ಇರಲಿಲ್ಲ. ಆದರೆ ತಂದೆ ತಾಯಿಗಳ ಕಣ್ಣಲ್ಲಿ? ಅವರೆಲ್ಲಾದರೂ ಎದುರೆದುರಿಗೇ ಮೂದಲಿಸಿದ್ದರೆ ಅವರ ಈಗಿನ ನಿರಂತರ ಅಚಲ ಮೌನದಷ್ಟು ನೋವು